

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮದುವೆಯ ಮಾಂತ್ರಿಕತೆ!

ಹಿಂದಿನ ವಾರದ ಅಂಕಣ ಬರಹ ಕೆಲವಾರು ಓದುಗರ ಪ್ರತಿಕ್ರಿಯೆಗಳಿಗೆ ಇಂಬು ಮಾಡಿಕೊಟ್ಟಿದೆ. ಆದ್ದರಿಂದ ಈ ವಾರವೂ ಆ ವಿಷಯವನ್ನೇ ಕುರಿತು ಇನ್ನಷ್ಟು ವಿಚಾರಗಳನ್ನು ಓದುಗರ ಮುಂದಿಡಲಾಗಿದೆ. 'The first two years of married life is not at all a probationary period' ಎಂದು ಒಪ್ಪಿಕೊಳ್ಳುವ ಪ್ರವೀಣ್ ಪಾಶ್ಚಾತ್ಯರಲ್ಲಿರುವ ಡೇಟಿಂಗ್ ಪದ್ಧತಿಯೂ ಸಹ ಮದುವೆಗೆ ಮುಂಚಿನ probationary period ಅಲ್ಲ, ಅದು ಮದುವೆಗೆ ದಾರಿಮಾಡಿಕೊಡುವುದಿಲ್ಲ ಎಂದು ಸ್ಪಷ್ಟವಾಗಿ ನಿರಾಕರಿಸುತ್ತಾರೆ. ಡೇಟಿಂಗ್ ನಡೆಸುವ ಅಲ್ಲಿಯ ಯುವಜನರು ವಯಸ್ಸಿಗೆ ಸಹಜವಾದ ದೈಹಿಕ ಆಕರ್ಷಣೆಯ ಕಾರಣದಿಂದ ಸ್ವಚ್ಛಂದವಾಗಿ ಓಡಾಡಿಕೊಂಡಿದ್ದು ಮದುವೆ ವಿಷಯ ಬಂದಾಗ ಶೇ. 99 ರಷ್ಟು ಜನರು ಬೇರೆ ಸಂಗಾತಿಯ ಅನ್ವೇಷಣೆಯಲ್ಲಿ ತೊಡಗುತ್ತಾರೆ ಎಂಬುದು ಅವರ ನಿಲುವು. ಪಾಶ್ಚಾತ್ಯರಲ್ಲಿ ವಿವಾಹ ವಿಚ್ಛೇದನ ಶೇಕಡ 50 ಕ್ಕೂ ಹೆಚ್ಚು ಇದ್ದು ಭಾರತದಲ್ಲಿ ಶೇಕಡ 2 ಕ್ಕಿಂತ ಕಡಿಮೆ ಇರುವುದನ್ನು ಗಮನಿಸಿದರೆ ಭಾರತೀಯ ಸಂಪ್ರದಾಯ ಮತ್ತು ಸಂಸ್ಕೃತಿ ಇನ್ನೂ ಎಷ್ಟೊಂದು ಬಲವಾಗಿದೆ ಎಂಬುದನ್ನು ಮನಗಾಣಬಹುದು ಎನ್ನುತ್ತಾರೆ.

ಬೆಂಗಳೂರಿನ ಡಾ| ಬಿ.ಆರ್ ಸತ್ಯನಾರಾಯಣ "ಭಾರತೀಯ ಸಂಸ್ಕೃತಿಯ ಅತ್ಯುನ್ನತ ಮಟ್ಟದ ಪ್ರತಿಪಾದಕರಲ್ಲಿ ಕುವೆಂಪು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ಆದರೆ ಗೊಡ್ಡು ಸಂಪ್ರದಾಯಗಳನ್ನು ಅಷ್ಟೇ ಖಡಾಖಂಡಿತವಾಗಿ ನಿರಾಕರಿಸುತ್ತಾರೆ. ಸಂಪ್ರದಾಯದ ಹೆಸರಿನಲ್ಲಿ, ಪ್ರತಿಷ್ಠೆಯ ಹೆಸರಿನಲ್ಲಿ ಮದುವೆಗಳಿಗಾಗಿ ನಡೆಯುತ್ತಿದ್ದ ದುಂದುವೆಚ್ಚವನ್ನು, ಮದುವೆಯ ವಿಚಾರದಲ್ಲಿ ನಂಬಿಕೊಂಡಿದ್ದ ಜಾತಕ, ರಾಹುಕಾಲ, ಗುಳಿಕಕಾಲ, ಪುರೋಹಿತರ ಮಂತ್ರ ಎಂದು ಮುಂತಾಗಿ ನಂಬಿಕೊಂಡಿದ್ದ ಮೂಢನಂಬಿಕೆಗಳನ್ನು ನಿವಾರಿಸುವ ದೃಷ್ಟಿಯಿಂದ ಕುವೆಂಪು ಅವರು ಸರಳ ಮದುವೆಯನ್ನು ಪ್ರತಿಪಾದಿಸಿದರು. ಅದಕ್ಕೆ ಒಂದು ಸಾಂಸ್ಥಿಕ ರೂಪವನ್ನು ಕೊಡಬೇಕೆಂದು ಸನಾತನವಾದ ಕೆಲವು ಅರ್ಥಪೂರ್ಣ ಮಂತ್ರಗಳನ್ನು ಕನ್ನಡೀಕರಿಸಿ ಮಂತ್ರಮಾಂಗಲ್ಯ ವಿಧಿಯನ್ನು ಸಿದ್ಧಪಡಿಸಿದರು" ಎಂದು ಸರಿಯಾಗಿಯೇ ಪ್ರತಿಕ್ರಿಯಿಸಿ ಅಂಕಣದ ನಮ್ಮ ಕೆಲ ಮಾತುಗಳನ್ನು 'ಅವಸರದ ನಿರ್ಧಾರ'ವೆಂದು ತಪ್ಪಾಗಿ ಗ್ರಹಿಸಿದ್ದಾರೆ.

ಕುವೆಂಪು ಅವರು ರೂಪಿಸಿದ ಮಂತ್ರಮಾಂಗಲ್ಯ ವಿಧಿಯು ಸನಾತನ ಮಂತ್ರಗಳನ್ನೇ ಆಧರಿಸಿದ್ದು ಅವುಗಳ ಉದಾತ್ತ ಆಶಯಗಳಿಗೆ ಅನುಗುಣವಾಗಿಯೇ ಇದೆ ಎಂಬುದರಲ್ಲಿ ಎರಡು ಮಾತಿಲ್ಲ. ಕಳೆದ ವಾರದ ಲೇಖನದಲ್ಲಿ ಸಾಂಪ್ರದಾಯಿಕವಾಗಿ ಬಳಕೆಯಲ್ಲಿರುವ ಸಂಸ್ಕೃತಮಂತ್ರಗಳ ಹೆಗ್ಗಳಿಕೆಯೂ ಇಲ್ಲ; ಮಂತ್ರಮಾಂಗಲ್ಯದ ಹೀಗಳಿಕೆಯೂ ಇಲ್ಲ. ಸಾಂಪ್ರದಾಯಿಕ ಮಂತ್ರಗಳಲ್ಲಿ ಇಲ್ಲದೇ ಇರುವುದು ಮಂತ್ರಮಾಂಗಲ್ಯದಲ್ಲೇನಿದೆ ಎಂಬ ಮೂದಲಿಕೆಯೂ ಅಲ್ಲಿಲ್ಲ. ಶಾಲೆಯಲ್ಲಿ ಮಕ್ಕಳು ಓದುವಾಗ ತಪ್ಪು ಉಚ್ಚಾರಣೆ ಮಾಡಿದರೆ ಹೇಗೆ ಶಿಕ್ಷಕರು ತಿದ್ದುತ್ತಾರೋ ಹಾಗೆ ತಪ್ಪು ಆಚರಣೆ ಮಾಡಿದವರನ್ನು ತಿದ್ದುವ ಪ್ರಯತ್ನ ಮಾಡಿದವರು ಕುವೆಂಪು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು ಮಂತ್ರಗಳನ್ನು ರಚಿಸಿದವರು ಪುರೋಹಿತರಲ್ಲ. ವಿವಾಹದ ವಿಷಯದಲ್ಲಿಯೇ ಆಗಲಿ, ಯಾವುದೇ ವಿಧಿಯ ವಿಷಯದಲ್ಲಿಯೇ ಆಗಲಿ ಪ್ರಾಚೀನ ಋಷಿ ಮುನಿಗಳು ಮೂಢನಂಬಿಕೆಯನ್ನು ಎಲ್ಲಿಯೂ ಪ್ರತಿಪಾದಿಸಿಲ್ಲ. ಅದನ್ನೇ ಕುವೆಂಪು ಅವರು ಮಂತ್ರ ಮಾಂಗಲ್ಯದಲ್ಲಿ "ಸಹಸ್ರಾರು ವರ್ಷಗಳ ಕಾಲ ಯಾವ ಮೌಲ್ಯಗಳನ್ನು ಭಾರತೀಯರು ದೊಡ್ಡದು ಎಂದು ಭಾವಿಸಿ ಆರಾಧಿಸುತ್ತಾ ಬಂದಿದ್ದಾರೋ ಆ ಎಲ್ಲಕ್ಕೂ ಸಂಕೇತಗಳಾಗಿರುವ ಶಕ್ತಿಯನ್ನು ವಧೂವರರು ತಮ್ಮ ಬದುಕಿನ ಅಮೃತ ಮಹೂರ್ತದಲ್ಲಿ ಈ ಮಂತ್ರಗಳ ಮೂಲಕ, ವಿವಾಹ ಸಂಹಿತೆಯ ಪ್ರತಿಜ್ಞಾವಿಧಿಗಳ ಮುಖಾಂತರ ತಮ್ಮ ಚೇತನಕ್ಕೆ ಆಹ್ವಾನಿಸುತ್ತಾರೆ" ಎಂದು ವಿವರಣೆ ನೀಡಿರುತ್ತಾರೆ. ಕುವೆಂಪು ಅವರ 'ಮಂತ್ರಮಾಂಗಲ್ಯ'ದ ಟಾರ್ಗೆಟ್ ಮಂತ್ರಗಳಲ್ಲ; ಮಂತ್ರಗಳ ಆಶಯದಂತೆ ನಡೆಯದ ಸಾಮಾಜಿಕ ವ್ಯವಸ್ಥೆ ಮತ್ತು ಕರ್ಮಠತನ. ಕುವೆಂಪು ಅವರಿಗೆ ವಿವಾಹ ವಿಧಿಯಲ್ಲಿ ಮಂತ್ರಗಳನ್ನು ಬಳಸುವುದಕ್ಕೆ ವಿರೋಧವಿರಲಿಲ್ಲ; ಹಾಗೆ ವಿರೋಧವಿದ್ದಿದ್ದರೆ ಮಂತ್ರ ಮಾಂಗಲ್ಯದಲ್ಲಿ ಪ್ರಾಚೀನ ಕಾಲದ ಮಂತ್ರಗಳನ್ನು ಅನುವಾದಿಸಿ ಅಳವಡಿಸಿಕೊಳ್ಳಲು ಅವರು ಮುಂದಾಗುತ್ತಿರಲಿಲ್ಲ.

ಮಂತ್ರಗಳು ಎಂದರೆ ಮಡಿವಂತಿಕೆ, ಅಂಧಶ್ರದ್ಧೆ, ಕರ್ಮಠತನ, ಗೊಡ್ಡು ಸಂಪ್ರದಾಯ ಎಂಬಂತಾಗಿರುವುದು ಅವುಗಳ ಆಶಯದಂತೆ ನಡೆಯದ ಜನರಿಂದ. ಮಂತ್ರಗಳ ಆಶಯದಂತೆ ಜನರ ಬದುಕು ಇಲ್ಲದಿದ್ದರೆ ಅದಕ್ಕೆ ಇಂದಿನ ಸಾಮಾಜಿಕ ನಡವಳಿಕೆ ಕಾರಣವೇ ಹೊರತು ಮಂತ್ರಗಳಲ್ಲ. ಇಂದಿನ ಸ್ಥಿತಿಯೇ ನೂರಾರು ವರ್ಷಗಳ ಹಿಂದೆಯೂ ಇತ್ತು. ವಿಚಾರವಾದಿಗಳು ಅದನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಉದಾಹರಣೆಗೆ ಬಸವಣ್ಣನವರ ಈ ಮುಂದಿನ ವಚನವನ್ನು ಗಮನಿಸಿ:

> **ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ**
> **ರಾಶಿಕೂಟ ಋಣಸಂಬಂಧ ಉಂಟೆಂದು ಹೇಳಿರಯ್ಯಾ!**
> **ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯಾ**
> **ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ!**

ಬಸವಣ್ಣನವರ ಈ ವೈಚಾರಿಕ ನಿಲುವೇ ಕುವೆಂಪು ಅವರ 'ಮಂತ್ರಮಾಂಗಲ್ಯ'ದಲ್ಲಿ ಪರೋಕ್ಷವಾಗಿ ಕಾಣಬರುವುದು. ಮದುವೆಯು ಮಂತ್ರ ಮಾಂಗಲ್ಯದ ವಿಧಿಯಂತೆ ಆದರೇನು, ಸಾಂಪ್ರದಾಯಿಕ ರೀತಿಯಲ್ಲಿ ಆದರೇನು, ಗಂಡು ಹೆಣ್ಣು

ಮೆಚ್ಚಿ ಯಾವುದೋ ದೇವಸ್ಥಾನದಲ್ಲಿ ಆದರೇನು, ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಆದರೇನು.... ಇವಾವೂ ಮುಖ್ಯವಲ್ಲ. ಅತಿ ಮುಖ್ಯವಾದ ವಿಚಾರವೆಂದರೆ ವಿವಾಹದ ನಂತರ ಸತಿಪತಿಗಳು ಹೇಗೆ ಹೊಂದಾಣಿಕೆಯಿಂದ ಬಾಳಿ ಬದುಕುತ್ತಾರೆ ಎಂಬುದು. ಪರಸ್ಪರರಲ್ಲಿ ಪ್ರೀತಿ-ಗೌರವ ಇರುವವರ ಮದುವೆ ಯಾವ ಪದ್ಧತಿಯಲ್ಲಿ ಆದರೇನು ಊರ್ಜಿತವೇ; ಅವು ಇಲ್ಲದವರ ಮದುವೆ ಯಾವ ಪದ್ಧತಿಯಲ್ಲಿ ನಡೆದರೂ ಅನೂರ್ಜಿತವೇ!

ಮತ್ತೋರ್ವ ಪ್ರಬುದ್ಧ ಓದುಗರಾದ ನಿವೃತ್ತ ನ್ಯಾಯಾಧೀಶ ಅಶೋಕ ಪೂಜಾರ್ ಅವರು ದೂರವಾಣಿಯಲ್ಲಿ ನಮ್ಮ ಗಮನಕ್ಕೆ ತಂದ ರೋಚಕವಾದ ಕಥಾನಕ: ಒಬ್ಬ ಯುವಕ ಕಬೀರದಾಸರ ಬಳಿ ಹೋಗುತ್ತಾನೆ. ಮದುವೆಯಾಗಲಿರುವ ತನಗೆ ಒಂದು ಸಂದೇಶವನ್ನು ನೀಡುವಂತೆ ಕೇಳುತ್ತಾನೆ. ಆಗ ನೂಲು ತೆಗೆಯುತ್ತಾ ಕುಳಿತಿದ್ದ ಕಬೀರ ಇಬ್ಬರಿಗೂ ಚಹಾ ಮಾಡಿ ತರುವಂತೆ ತನ್ನ ಹೆಂಡತಿಗೆ ಹೇಳುತ್ತಾನೆ. ಸ್ವಲ್ಪ ಹೊತ್ತಿನಲ್ಲಿಯೇ ಹೆಂಡತಿ ತಂದುಕೊಡುತ್ತಾಳೆ. ಕಬೀರನು ಚಹಾ ಗುಟುಕರಿಸಿ 'ಆಹಾ ಎಷ್ಟು ಚೆನ್ನಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾನೆ. ಯುವಕ ಚಹಾದ ಕಪ್ಪನ್ನು ಕೆಳಗಿರಿಸಿ ಮುಖ ಸೊಟ್ಟಗೆ ಮಾಡಿಕೊಳುತ್ತಾನೆ. ಏಕೆಂದರೆ ಅದರಲ್ಲಿ ಸಕ್ಕರೆಯ ಬದಲು ಉಪ್ಪನ್ನು ಹಾಕಲಾಗಿತ್ತು! ಸಕ್ಕರೆಯ ಬದಲು ಉಪ್ಪು ಹಾಕಿದ್ದರೂ ಚಹಾ ಚೆನ್ನಾಗಿದೆಯೆಂದು ಮೆಚ್ಚುಗೆ ವ್ಯಕ್ತಪಡಿಸಿದ ಕಬೀರರ ವರ್ತನೆಯಿಂದ ಆಶ್ಚರ್ಯಚಕಿತನಾದ ಯುವಕ ಸೌಜನ್ಯಕ್ಕಾಗಿ ಚಹಾವನ್ನು ಔಷಧಿಯಂತೆ ಮನಸ್ಸಿಲ್ಲದ ಮನಸ್ಸಿನಲ್ಲಿ ಕುಡಿದು 'ನನಗೆ ತಮ್ಮ ಸಂದೇಶವೇನು?' ಎಂದು ಮತ್ತೆ ಕೇಳುತ್ತಾನೆ. ಕಬೀರ ತನ್ನ ಹೆಂಡತಿಗೆ 'ಲಾಟೀನು ತಗೊಂಡು ಬಾ' ಎಂದು ಹೇಳುತ್ತಾನೆ. ಹಾಡುಹಗಲಿನಲ್ಲಿ ಲಾಟೀನು ಏಕೆ ಬೇಕು ಎಂದು ಯುವಕ ಆಲೋಚಿಸುತ್ತಿರುವಷ್ಟರಲ್ಲಿಯೇ ಹೆಂಡತಿ ಲಾಟೀನು ಹಚ್ಚಿಕೊಂಡು ಬಂದು ಗಂಡನ ಮುಂದಿಡುತ್ತಾಳೆ.

ಇವೆರಡೂ ಘಟನೆಗಳಿಂದ ಕಬೀರ ಮದುವೆಯಾಗಲಿರುವ ಯುವಕನಿಗೆ ನೀಡಿದ ಸಂದೇಶ: ಹೆಂಡತಿ ಚಹಾಕ್ಕೆ ಸಕ್ಕರೆಯ ಬದಲು ಉಪ್ಪನ್ನು ಹಾಕಿದ್ದಳು. ಆದರೂ ಅವಸರದಲ್ಲಿ ಅವಳಿಂದಾದ ಪ್ರಮಾದವನ್ನು ಅವನು ಎತ್ತಿತೋರಿಸದೆ ನಸುನಗುತ್ತಾ ಚಹಾ ಗುಟುಕರಿಸಿದ್ದ. ಗಂಡ ಲಾಟೀನು ತರಲು ಹೇಳಿದಾಗ 'ಹಗಲು ಹೊತ್ತಿನಲ್ಲಿ ಲಾಟೀನು ಏಕೆ ಬೇಕು?' ಎಂದು ಹೆಂಡತಿ ಕೇಳಲಿಲ್ಲ. ಗಂಡ ಕೇಳುತ್ತಾನೆಂದರೆ ಅದರ ಅವಶ್ಯಕತೆ ಏನೋ ಇರಬೇಕೆಂದು ಮರುಮಾತನಾಡದೆ ತಂದುಕೊಟ್ಟಿದ್ದಳು.

ಹೀಗೆ ಸತಿಪತಿಗಳಾದವರಲ್ಲಿ ಮುಖ್ಯವಾಗಿ ಇರಬೇಕಾದುದು ಹೊಂದಾಣಿಕೆ; ಪರಸ್ಪರರು ದೋಷಾರೋಪಣೆ ಮಾಡದ ಮನೋಧರ್ಮ.

**ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ**
**ಸತಿ-ಪತಿಗಳೊಂದಾಗದ ಭಕ್ತಿ**
**ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥ!**

ಎನ್ನುತ್ತಾರೆ ಹಿರಿಯ ವಚನಕಾರ ದಾಸಿಮಯ್ಯ. ಸತಿ-ಪತಿಗಳು ಒಂದಾಗಿ ಸಲ್ಲಿಸುವ ಭಕ್ತಿ ಶಿವನಿಗೆ ಪ್ರಿಯವಾಗುತ್ತದೆ ಎಂಬುದು ಎಷ್ಟು ಸತ್ಯವೋ, ದಾಂಪತ್ಯ ಜೀವನದಲ್ಲಿ ಒಂದಾದ ಮನಸ್ಸಿನ ಸತಿ-ಪತಿಗಳ ಜೀವನ ಶಿವಮಯವಾಗಿರುತ್ತದೆ ಎಂಬುದೂ ಅಷ್ಟೇ ಸತ್ಯ. ಅದು ಪರಸ್ಪರರಲ್ಲಿ ಪ್ರೀತಿ, ಅನುರಾಗಗಳು ಇದ್ದಾಗ ಮಾತ್ರ ಸಾಧ್ಯ. ಅದಿಲ್ಲದಿದ್ದರೆ ರಹೀಂ ಹೇಳುವಂತೆ ಮದುವೆಯೆಂಬುದು ಡೋಲುಬಜಾವಣೆ ಮಾಡುತ್ತಾ ಕಾಲಿಗೆ ಹಾಕುವ ಬೇಡಿ (ಪಾಯನ್ ಬೇಡೀ ಪಡತ್ ಹೈಂ, ಡೋಲ್ ಬಜಾಯ್ ಬಜಾಯ್!). ಗಂಡಹೆಂಡಿರ ಮಧ್ಯೆ ಪ್ರೀತಿ ಅನುರಾಗಗಳು ಇದ್ದರೆ ಅದೇ ರಹೀಮ ಇನ್ನೊಂದು ದೋಹೆಯಲ್ಲಿ ಹೇಳುವಂತೆ: ಕಬ್ಬಿನ ಗಂಟಿದ್ದಲ್ಲಿ ರಸವಿರುವುದಿಲ್ಲ, ಅದೇ ಮದುವೆ ಮಂಟಪದಲ್ಲಿ ಹಾಕುವ ಬ್ರಹ್ಮಗಂಟಿನಲ್ಲಿ ಗಂಟು ಗಂಟಿಗೂ ರಸವೇ ರಸ!

**ಜಹಾಂ ಗಾಂಠ್ ತಂಹ್ ರಸ್ ನಹೀಂ, ಯಹ್ ರಹೀಂ ಜಗ್ ಜೋಯ್ ।**
**ಮಂಡಏ ತರ್ ಕೀ ಗಾಂಠ್ ಮೇಂ, ಗಾಂಠ್ ಗಾಂಠ್ ರಸ್ ಹೋಯ್!**

28.6.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑